

## ಭೂಮಿ ನುಂಗುವ ಡೈನೊಸಾರ್!

ಅರೆ! ಡೈನೊಸಾರ್ ಸಂತತಿಯೇ ಈಗಿಲ್ಲ. ಇನ್ನು ಅದು ನಮ್ಮ ಭೂಮಿಯನ್ನು ಹೇಗೆ ನುಂಗುವುದೆಂಬ ಪ್ರಶ್ನೆ ನಿಮ್ಮಲ್ಲಿ ಮೂಡಬಹುದು. ಹೌದು, ಡೈನೊಸಾರ್ ಈಗಿಲ್ಲ. ಆದರೆ, ನೀವು ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿ ರೈಲು ನಿಲ್ದಾಣದ ಮುಖ್ಯ ದ್ವಾರದಲ್ಲಿ ಭೂಮಿ ನುಂಗುತ್ತಿರುವ ಡೈನೊಸಾರ್ ಕಾಣಬಹುದು!

'ಪ್ಲಾಸ್ಟಿಕ್ ಪರಿಸರ ಹಾಳುಮಾಡುತ್ತಿದೆ. ಅದರ ಅತಿಯಾದ ಬಳಕೆಯು ಪ್ರಾಣಿ, ಪಕ್ಷಿ, ಸಸ್ಯ–ಸಂಕುಲಕ್ಕಷ್ಟೇ ಅಲ್ಲದೆ ಮಾನವರಿಗೂ ಹಾನಿಯುಂಟು ಮಾಡುತ್ತಿದೆ. ಪ್ಲಾಸ್ಟಿಕ್ ನಾಶವಾಗದ ಸಂಯುಕ್ತವಾಗಿದ್ದು, ಅದನ್ನು ಕರಗಿಸುವಾಗ ಹೊರಸೂಸುವ ಅನಿಲವೂ ಪರಿಸರದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ' ಎಂದು ತಜ್ಞರು ಹೇಳುತ್ತಿದ್ದರೂ ಪ್ಲಾಸ್ಟಿಕ್ ಮೇಲಿನ ಅವಲಂಬನೆಯನ್ನು ನಾವೆಲ್ಲರೂ ತೀವ್ರಗೊಳಿಸುತ್ತಿದ್ದೇವೆ.

ಇದಕ್ಕೆ ಸ್ಪಷ್ಟ ಉದಾಹರಣೆಯಂತಿದೆ ಈ ಚಿತ್ರ. ನಾವು, ನೀವೆಲ್ಲರೂ ಬಳಸಿ ಬಿಸಾಡಿದ ಪ್ಲಾಸ್ಟಿಕ್ ಬಾಟಲಿಗಳನ್ನೇ ಸಂಗ್ರಹಿಸಿ, ಅವುಗಳ ರಾಶಿಯನ್ನೇ ಭೂಮಿ ನುಂಗುವ ಡೈನೊಸಾರ್ ಪ್ರತಿಕೃತಿಯಾಗಿಸಿ ರೈಲು ನಿಲ್ದಾಣದ ಎದುರು ಇಡಲಾಗಿದೆ. ಹೆಚ್ಚೆಚ್ಚು ಪ್ಲಾಸ್ಟಿಕ್ ಬಳಸಿ ಅವುಗಳನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ಪರಿಸರಕ್ಕೆ ತೀವ್ರ ಹಾನಿಯುಂಟಾಗುವುದಲ್ಲದೆ ಅದೇ ತ್ಯಾಜ್ಯ ನಮ್ಮನ್ನು ಡೈನೊಸಾರ್ ರೂಪದಲ್ಲಿ ನುಂಗಬಹುದು ಎನ್ನುವುದು ಈ ಪ್ರತಿಕೃತಿಯು ನೀಡುವ ಸಂದೇಶ. ಇಂತಹ ಹಲವು ಪ್ರತಿಕೃತಿಗಳನ್ನು ಅಳವಡಿಸಿಕೊಂಡಿರುವ ರೈಲು ನಿಲ್ದಾಣವು ಮಾರ್ಮಿಕವಾಗಿಯೇ ಪರಿಸರ ಕಾಳಜಿಯ ಪಾಠವನ್ನು ನಮಗೆ ಕಲಿಸುತ್ತಿದೆ!

–ಶರಣು ಜಿ. ಚಟ್ಟಿ, ಗೋಲಗೇರಿ

## ಕೆಳದಿ ಮಠದ ಪಚ್ಚೆಲಿಂಗ ದರ್ಶನ

ಸುಮಾರು 1 ಸಾವಿರ ವರ್ಷಗಳಷ್ಟು ಹಳೆಯ ಪಚ್ಚೆ ಶಿವಲಿಂಗವನ್ನು ವಾಡಿಕೆಯಂತೆ ವಿಜಯದಶಮಿಯಂದು ಸಾಗರ ತಾಲ್ಲೂಕಿನ ಕೆಳದಿ ಮಠದಲ್ಲಿ ಸಾರ್ವಜನಿಕ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು. ಕೆಳದಿ ಬಂದಗದ್ದೆ ರಾಜಗುರು ಹಿರೇ ಮಠಕ್ಕೆ ಐದಿಂಚು ಎತ್ತರದ, 1 ಕೆಜಿ ತೂಕದ ಈ ಪಚ್ಚೆಲಿಂಗವನ್ನು ಕೆಳದಿ ಅರಸ ರಾಮರಾಜ ನಾಯಕರು (1571–1583 ಆಳ್ವಿಕೆ ಅವಧಿ) ಮಠದ ರೇವಣ್ಣ ಸಿದ್ದೇಶ್ವರರಿಗೆ ನೀಡಿದ್ದರು. ಅತ್ಯಂತ ಮೌಲ್ಯವಾದ ಹಾಗೂ ಅತೀ ಅಪರೂಪದ ಶಿವಲಿಂಗವಾಗಿದ್ದರಿಂದ ಇದನ್ನು ಬ್ಯಾಂಕ್‌ನ ಲಾಕರ್‌ನಲ್ಲಿ ಭದ್ರವಾಗಿರಿಸಲಾಗಿತ್ತು. 1999ರವರೆಗೆ ಪ್ರತಿ ವರ್ಷ ವಿಜಯದಶಮಿಯಂದು ಸಾರ್ವಜನಿಕ ದರ್ಶನಕ್ಕೆ ಇಡಲಾಗುತ್ತಿತ್ತು. ನಂತರ ಕಾರಣಾಂತರಗಳಿಂದ 2019ರವರೆಗೆ ದರ್ಶನ ಭಾಗ್ಯವಿರಲಿಲ್ಲ. ನಂತರ ಕೊರೊನಾ ಕಾರಣದಿಂದ ಎರಡು ವರ್ಷ ಮತ್ತೆ ಸಾರ್ವಜನಿಕ ದರ್ಶನಕ್ಕೆ ಅನುವು ಮಾಡಿರಲಿಲ್ಲ. ಈ ಬಾರಿ ಆ ಅವಕಾಶವು ಮಠದ ಭಕ್ತರಿಗೆ ದಕ್ಕಿದೆ.

–ಅಂಜನ್ ಕಾಯ್ಕಿಣಿ, ಸಾಗರ





## ಹೊಸ್ತಿಲ ತಿಲಕ ವೆಂಕಟಯ್ಯ!

ಮಂಡ್ಯ ಜಿಲ್ಲೆಯ ಮೇಲುಕೋಟೆ ಚೆಲುವ ನಾರಾಯಣಸ್ವಾಮಿ ದೇಗುಲದ ದ್ವಾರವೊಂದರ ಹೊಸ್ತಿಲಿನಲ್ಲಿ ಈ ಶಿಲ್ಪದ ಕೆತ್ತನೆ ಕಂಡುಬರುತ್ತದೆ. ಇದರಲ್ಲಿ 'ಮೇಲುಕೋಟೆ ಬೆಟ್ಟದ ಕಸ್ತೂರೆಯ್ಯನವರ ಮಗ ವೆಂಕಟಯ್ಯ' ಎಂಬ ಬರಹವನ್ನು ವೀರಗಲ್ಲಿನಲ್ಲೇ ಕೆತ್ತಲಾಗಿದೆ. ಪಾಪ ಕೃತ್ಯಗಳಲ್ಲಿ ತೊಡಗಿದವರ ಶಿಲ್ಪಗಳನ್ನು ಕೆತ್ತಿ ದೇಗುಲದಲ್ಲಿ ಭಕ್ತಾದಿಗಳು ನಡೆದಾಡುವ ಜಾಗದಲ್ಲಿ ಈ ರೀತಿ ಹಿಂದಿನ ಕಾಲದಲ್ಲಿ ಜೋಡಿಸುತ್ತಿದ್ದರು ಎನ್ನುವ ಮಾತಿದೆ. ಅಂತಹದ್ದೆಲ್ಲವನ್ನೂ ನೋಡಿ, ಓದಿ ತಿಳಿದುಕೊಂಡ ನಮ್ಮಂಥವರಿಗೆ ಇದು ವಿಶೇಷವಾಗಿ ಕಂಡಿತು. ಹೊಸ್ತಿಲ ಮೇಲೆ ಇರುವುದರಿಂದ ಇದನ್ನು ಯಾರೂ ಮೆಟ್ಟುವುದಿಲ್ಲ. ಬದಲಿಗೆ ಮುಟ್ಟಿ ನಮಸ್ಕರಿಸಿ ದಾಟುತ್ತಾರೆ. ಕಾಕತಾಳೀಯ ಎಂಬಂತೆ ಮೇಲುಕೋಟೆಯ ಇತಿಹಾಸದಲ್ಲಿ ಮೈಸೂರು ಅರಸರ ಕಾಲದಲ್ಲಿ ಮಹಾದಾನಿ ವೆಂಕಟಪತಿರಾಯನೆಂಬ ಅರಸ ಈ ದೇಗುಲದ ಪರಮಭಕ್ತನಾಗಿದ್ದ ಎಂಬ ವಿವರ ಸಿಗುತ್ತದೆ. ವೆಂಕಟಪತಿರಾಯ ಮತ್ತು ಈ ವೆಂಕಟ ಇಬ್ಬರೂ ಒಬ್ಬನೇ ಆಗಿರಬಹುದೆ ಎನ್ನುವ ಪ್ರಶ್ನೆ ಮೂಡುತ್ತದೆ. ತಿಳಿದವರು ಉತ್ತರಿಸಬೇಕು.

–ವಾ. ಮುರಳೀಧರ, ತೀರ್ಥಹಳ್ಳಿ